**ಓ ಎಸ್ ನಂಃ 325-14**
**ಪಿ ಡಬ್ಲ್ಯೂ ಃ 1**

**ದಿಃ 25-02-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 4 ಎ ರಿಂದ 4 ಡಿ ಪರವಾಗಿ ಶ್ರೀ ಎಂ ಎಂ ವಕೀಲರಿಂದ**

2010 ಇಸವಿಯಲ್ಲಿ ನರಸೇಗೌಡ ಎಂಬುವವರು ತಪ್ಪು ವಿಳಾಸವನ್ನು ನಮೂದಿಸಿ ನನ್ನ ಹೆಸರಲ್ಲಿರುವ ಆಸ್ತಿಯನ್ನು ಅವರ ಹೆಸರಿಗೆ ಮಾಡಿಸಿದ್ದ ಕಾರಣ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ. ದಾವಾ ಸ್ವತ್ತು ನನ್ನ ಸ್ವತ್ತು ಆಗಿರುತ್ತದೆ. ದಾವಾ ಸ್ವತ್ತನ್ನು ನನ್ನ ಅತ್ತೆ ಈರಮ್ಮರವರು ನನಗೆ ವಿಲ್ ಮಾಡಿದ ಕಾರಣ ನನಗೆ ಬಂದಿತ್ತು. ಈರಮ್ಮರವರ ಗಂಡನ ಹೆಸರು ಸಂಜೀವೇಗೌಡ. ಸಂಜೀವೇಗೌಡ ನರಸಿಂಹೇಗೌಡರವರ ಮಗ. ನರಸಿಂಹೇಗೌಡರವರು ಈರಮ್ಮರವರಿಗೆ ಮಾವ ಆಗಬೇಕು. ನರಸಿಂಹೇಗೌಡರವರ ದೊಡ್ಡ ಹೆಂಡತಿ ಮಕ್ಕಳು ನರಸಪ್ಪ ಮತ್ತು ಸಂಜೀವೇಗೌಡ ಹಾಗೂ ಅವರ ಚಿಕ್ಕ ಹೆಂಡತಿಯ ಮಕ್ಕಳ ಹೆಸರು ಲಕ್ಷ್ಮಣಗೌಡ, ರಾಮೇಗೌಡ, ಚಿಕ್ಕನರಸೇಗೌಡ.

1 ನೇ ಪ್ರತಿವಾದಿ ಲಕ್ಷ್ಮಣಗೌಡ ರವರ ಮಗ, 2 ಮತ್ತು 3 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು. ನನ್ನ ಅತ್ತೆ ಈರಮ್ಮರವರಿಗೆ ಮದುವೆ ಆಗುವ ಮುಂಚೆ ಸೋಲೂರು ಗ್ರಾಮದಲ್ಲಿ ವಾಸ ಮಾಡುತ್ತಿದ್ದರು. ಈರಮ್ಮರವರ ತಂದೆ ಹೆಸರು ನಾಗಣ್ಣ. ನಾಗಣ್ಣರವರು ಸಹ ಸೋಲೂರಿನಲ್ಲೆ ವಾಸ ಮಾಡುತ್ತಿದ್ದರು. ನಾಗಣ್ಣ ಮತ್ತು ಈರಮ್ಮರವರು ಸೋಲೂರಿನಲ್ಲಿ ವಾಸ ಮಾಡುತ್ತಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಾಗಣ್ಣರವರಿಗೆ ಮೂರು ಜನ ಹೆಣ್ಣು ಮಕ್ಕಳು. ಅವರುಗಳು ಚಿಕ್ಕನಾಗಮ್ಮ, ನನ್ನ ಅತ್ತೆ ಈರಮ್ಮ. ರುದ್ರಮ್ಮ.

ಈರಮ್ಮರವರಿಗೆ ಅವರ ತಂದೆ ಕಡೆಯಿಂದ ಆಸ್ತಿಗಳು ಬಂದಿದ್ದವು, ಸಾಕ್ಷಿ ಸ್ವತಃ ಹೇಳುತ್ತಾರೆ ಪಡಾ ಜಮೀನನ್ನು ಈರಮ್ಮರವರು 98 ಇಸವಿಯಲ್ಲಿ ಅರ್ಜಿ ಹಾಕಿ 94 ಇಸವಿಯಲ್ಲಿ ಅವರ ಹೆಸರಿಗೆ ಆದೇಶ ಬಂದಿತ್ತು. ನಾಗಣ್ಣರವರು ಚಿಕ್ಕನಾಗಮ್ಮ ಮತ್ತು ರುದ್ರಮ್ಮರವರಿಗೆ ಆಸ್ತಿಯನ್ನು ಕೊಟ್ಟಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ನನಗೆ ಗೊತ್ತಿಲ್ಲ. ನನ್ನ ಅತ್ತೆ ಈರಮ್ಮರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಅವರುಗಳು

ನನ್ನ ಯಜಮಾನರು ನರಸಿಂಹಯ್ಯ, ಉಗ್ರಪ್ಪ, ಭಾಗ್ಯಮ್ಮ, ನಾಗಮ್ಮ. ನನ್ನ ಅತ್ತೆಯ ಉಳಿದ ಮಕ್ಕಳನ್ನು ನಾನು ಈ ದಾವೆಯಲ್ಲಿ ಪಾಟಿ ಮಾಡಿದ್ದೇನೆ. ಅವರು ಈ ದಾವೆಯಲ್ಲೂ ಅವರಿಗೂ ಸಹ ಬಾಗ

ಬರಬೇಕು ಎಂದು ಕೇಳಿದ್ದಾರೆ.

ದಾವಾ ಸ್ವತ್ತು ನಾಗಣ್ಣರವರಿಗೆ ಅವರ ತಾತ ಮುತ್ತಾತ ಕಡೆಯಿಂದ ಬಂದಿತ್ತು. ಅವರಿಗೆ ದಾವಾ ಸ್ವತ್ತು ಅವರ ತಾತ ಮುತ್ತಾತ ಕಡೆಯಿಂದ ಬಂದಿದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜುರಪಡಿಸಿದ್ದೇನೆ. ನಿಪಿ 33 ಮತ್ತು 34 ರಲ್ಲಿ ಕಲಂ ನಂ 9 ರಲ್ಲಿ ನರಸಿಂಹೇಗೌಡರವರ ಹೆಸರನ್ನು ನಮೂದಿಸಲಾಗಿದೆ ಅಂದರೆ ಸಾಕ್ಷಿ ಅದು ಸುಳ್ಳು ದಾಖಲೆ ಎಂದು ಹೇಳುತ್ತಾರೆ. ನಿಪಿ 49 ಮತ್ತು 50 ರಲ್ಲಿ ನಾಗಣ್ಣರವರ ಹೆಸರು ನಮೂದನೆ ಆಗಿಲ್ಲ ಅಂದರೆ ಸರಿಯಲ್ಲ. ನಾಗಣ್ಣನ ಹಸೆರು ದಾಖಲೆಗಳಲ್ಲಿ ಇಲ್ಲದಿದ್ದರೂ ಸಹ ದಾವಾ ಸ್ವತ್ತು ನಾಗಣ್ಣರವರ ತಾತನ ಆಸ್ತಿ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅದಕ್ಕೆ ಸಂಬಂಧಪಟ್ಟ ಆದೇಶದ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು 70 ಇಸವಿಯ ನಂತರದ ಆರ್ ಟಿ ಸಿ ಗಳನ್ನು ಮತ್ತು ಮೂಲ ಕ್ರಯಪತ್ರ ಅಥವಾ ಇತರೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಾಗಣ್ಣರವರದು ನಾಗೋಜಿಪಾಳ್ಯದ ವಾಸಿ ಅಂದರೆ ಸರಿಯಲ್ಲ. ನಾಗಣ್ಣ ಮತ್ತು ಅವರ ಕುಟುಂಬದವರು ನಾಗೋಜಿಪಾಳ್ಯದಲ್ಲಿ ವಾಸ ಮಾಡುತ್ತಿದ್ದರು ಅಂದರೆ ಸರಿಯಲ್ಲ. ನನ್ನ ತವರು ಮನೆ ನಾಗೋಜಿಪಾಳ್ಯ. ನಾನು ನರಸಿಂಹಯ್ಯರವರನ್ನು ಮದುವೆ ಆಗಿದ ಕಾಲದಲ್ಲಿ ನಾಗೋಜಿಪಿಪಾಳ್ಯದಲ್ಲಿ ವಾಸ ಮಾಡುತ್ತಿದ್ದೆ. ನನ್ನ ಗಂಡ ನರಸಿಂಹಯ್ಯರವರು ಅಲ್ಲಿಯೇ ವಾಸ ಮಾಡುತ್ತಿದ್ದರು ಅಂದರೆ ಸಾಕ್ಷಿ ಅವರು ಸೋಲೂರಿನಲ್ಲಿ ವಾಸ ಮಾಡುತ್ತಿದ್ದರೆಂದು ಹೇಳುತ್ತಾರೆ.

ದಾವಾ ಸ್ವತ್ತಿನ ಸರ್ವೆ ನಂಬರ್ಗಳು ನನಗೆ ಗೊತ್ತು. ಸ ನಂ 131/4 ರಲ್ಲಿ 4 ಎಕರೆ 21 ಗುಂಟೆ, ಸದರಿ 4 ಎಕರೆ 21 ಗುಂಟೆ ಪೈಕಿ ನನ್ನ ಅತ್ತೆ 2 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ. ಹಾಗೂ ಇನ್ನೊಂದು ಸ ನಂ 104 ರಲ್ಲಿರುವ 1 ಎಕರೆ 38 ಗುಂಟೆ ಆಗಿರುತ್ತದೆ. ನನ್ನ ಅತ್ತೆ ಜೀವಂತ ಕಾಲದಲ್ಲಿ ಅವರು 2 ಎಕರೆ ಜಮೀನನ್ನು ಪೆಟ್ರೋಲ್ ಬಂಕ್ ಶಿವಕುಮಾರ್ ರವರಿಗೆ ಮಾರಾಟ ಮಾಡಿದ್ದರು. ಈ ದಾವೆಯಲ್ಲಿ ಶಿವಕುಮಾರ್ ರವರನ್ನು ಪ್ರತಿವಾದಿಯಾಗಿ ಮಾಡಿದ್ದೇನೆ. ಈ ದಾವೆಯನ್ನು ನಾನು 2 ಎಕರೆ 21 ಗುಂಟೆಗೆ ದಾಖಲಿಸಿದ್ದೇನೆ.

ಈ ದಾವೆಯಲ್ಲಿ ಶಿವಕುಮಾರ್ ರವರ ವಿರುದ್ದ ಯಾವುದೇ ಪರಿಹಾರವನ್ನು ಕೋರಿಲ್ಲ. ನನ್ನ ಅತ್ತೆ ಕಡೆಯಿಂದ ನನಗೆ 4 ಎಕರೆ 21 ಗುಂಟೆ ಜಮೀನು ಬಂದಿಲ್ಲ, ಬರೀ 2 ಎಕರೆ 21 ಗುಂಟೆ ಜಮೀನು ಮಾತ್ರ ಬಂದಿದೆ. ಶಿವಕುಮಾರ್ ರವರರಿಗೆ ಈರಮ್ಮ ರವರು ಆಸ್ತಿಯನ್ನು ಮಾರಾಟ ಮಾಡಿದ್ದರು, ಸಂಜೀವೆಗೌಡ ರವರು ಮಾರಾಟ ಮಾಡಿಲ್ಲ. ಈರಮ್ಮ ರವರು ಆಸ್ತಿಯನ್ನು ಮರಾಟ ಮಾಡುವ ಕಾಲಕ್ಕೆ ಸಂಜೀವೇಗೌಡರವರು ಬದುಕಿರಲಿಲ್ಲ. ಈರಮ್ಮರವರು ಆಸ್ತಿಯನ್ನು ಮಾರಾಟ

ಮಾಡಿದಾಗ ಅವರ ಮಕ್ಕಳ ಸಹಿಯನ್ನು ಪಡೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**